# <u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.</u>

## <u>ಸಿಸಿ ನಂ.125/2019</u>

ಫಿರ್ಯಾದಿಃ ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ/ತರುಃ 01. ಹಾಜಿಮಲಂಗ@ ರಾಜಾ ತಂದೆ ಮದರಸಾಬ ಮುಜಾವರ,
ವಃ 21 ವರ್ಷ, ಉಃ ಕೂಲಿ ಕೆಲಸ,

02. ಮದರಸಾಬ ತಂದೆ ಮದನಸಾಬ ಮುಜಾವರ,
ವಃ 55 ವರ್ಷ, ಉಃ ಕೂಲಿ ಕೆಲಸ,

03. ಶ್ರೀಮತಿ ಗಂಡ ಮದರಸಾಬ ಮುಜಾವರ,
ವಃ 45 ವರ್ಷ, ಉಃ ವ್ಯಾಪಾರ ಕೆಲಸ,

ಎಲ್ಲರ ವಾಸಃ ಮಾಶಾಳ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## <u>ದೋ ಷಾ ರೋ ಪ ಣೆ</u>

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 22.06.2018 ರಂದು ಬೆಳಿಗ್ಗೆ 10-00 ಗಂಟೆಯ ಸುಮಾರಿಗೆ ಅಫಜಲಪೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಾಶಾಳ ಗ್ರಾಮದಲ್ಲಿ 1ನೇ ಅರೋಪಿತನು ಫಿರ್ಯಾದಿ ಚಾಸಾ-1 ರುಕ್ಸಾನಾ ರವರಿಗೆ ಯಾಸಿ ಬೈಯುತ್ತಾ ಮನೆಯ ಮುಂದಿನಿಂದ ಹೋಗಿದ್ದು, ನಂತರ ಅದೇ ದಿನ ರಾತ್ರಿ 08-00 ಗಂಟೆ ಸುಮಾರಿಗೆ ಸದರಿ ಆರೋಪಿತರೆಲ್ಲರೂ ತಮ್ಮ ಮನೆಯ ಮುಂದೆ ಕುಳಿತಿದ್ದಾಗ ಫಿರ್ಯಾದಿ ಚಾಸಾ-1 ರವಳು ಅವರ ಹತ್ತಿರ ಹೋಗಿ 2 ಮತ್ತು 3ನೇ ಅರೋಪಿತರಿಗೆ ನಿಮ್ಮ ಮಗ ವಿನಾ ಕಾರಣ ನನಗೆ ಯಾಸಿ ಬೈಯುವದು ಮಾಡುತ್ತಾನೆ ಅಂತಾ ಹೇಳುತಿದ್ದಾಗ ಸದರಿ ಆರೋಪಿತರೆಲ್ಲರೂ ಫಿರ್ಯಾದಿ ಚಾಸಾ-1 ರುಕ್ಸಾನಾ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ನಿಮ್ಮಲ್ಲಿ 1ನೇ ಆರೋಪಿಯಾದ ನೀವು ಫಿರ್ಯಾದಿ ಚಾಸಾ-1 ಶ್ರೀಮತಿ ರಕ್ಷಾನಾ ರವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಸೀರೆ ಹಿಡಿದು ಜಗ್ಗಿ ಸಾರ್ವಜನಿಕ ರಸ್ತೆಯ ಮೇಲೆ ಹೆಣ್ಣುತನಕ್ಕೆ ಅವಮಾನಗೊಳಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.354(ಬಿ) ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಗ ಫಿರ್ಯಾದಿ ಚಾಸಾ-1 ರವರು ಚಿರಾಡುವ ಸಪ್ಪಳ ಕೇಳಿ ಚಾಸಾ-4 ಮತ್ತು 5 ರವರು ಬಂದು ಬಿಡಿಸುತಿದ್ದಾಗ ನಿಮ್ಮಲ್ಲಿ 1ನೇ ಆರೋಪಿಯಾದ ನೀವು ನಿನಗೆ ಇವತ್ತ ಬಿಡಲ್ಲಾ ಅಂತ ಅಂದು ಅವಳ ಕೊರಳಲ್ಲಿನ ತಾಳಿ ಜಗ್ಗಿ ತಾಳಿ ಹರಿದು ಬಲಗೈ ಅಂಗೈ ಮೇಲೆ ತನ್ನ ಬಾಯಿ ಹಲ್ಲಿನಿಂದ ಕಚ್ಚಿ ಕಂದುಗಟ್ಟಿದ ಗುಪ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಗ ಫಿರ್ಯಾದಿ ಚಾಸಾ-1 ರವರು ಚಿರಾಡುವ ಸಪ್ಪಳ ಕೇಳಿ ಚಾಸಾ-4 ಮತ್ತು 5 ರವರು ಬಂದು ಬಿಡಿಸುತ್ತಿರುವಾಗ 2 ರಿಂದ 3ನೇ ಆರೋಪಿತರಾದ ನೀವು ತಮ್ಮ ಕೈಯಿಂದ ಫಿರ್ಯಾದಿ ಚಾಸಾ-1 ಶ್ರೀಮತಿ ರುಕ್ಸಾನಾ ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ಫಿರ್ಯಾದಿ  ಚಾಸಾ-1 ಶ್ರೀಮತಿ ರುಕ್ಸಾನಾ ರವರಿಗೆ ಏ ರಂಡಿ ನೀ ಇನ್ನೊಮ್ಮೆ ನಮ್ಮ ತಂಟೆಗೆ ಬಂದಿ ನೀನ ಜೀವ ಸಹಿತ ಬಿಡುವುದಿಲ್ಲ ಅಂತಾ  ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-3

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 14.11.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಅಫಜಲಪೂರ.